ANUBHAVS



# ಪರಮ ಪೂಜ್ಯ ಬಾಪೂರವರ ಕೃಪೆ

© Copyright 2010, Manasamarthyadata.com

*ಪ್ರಮೋದ್ ನಿಕಮ್, ನಿರಾಲಾ ನಗರ, ಕಾನ್‌ಪುರ್*

ಫೆಬ್ರವರಿ 24, 2007ರಲ್ಲಿ ಆದ ಘಟನೆ ಲಕ್ನೋದಲ್ಲಿ ವಾಸಿಸುವ ನನ್ನ ತಂಗಿಯ ಗಂಡ ಶ್ರೀ ಎ.ಕೆ. ಘೋಹಾಂಜೆ, ಇವರು ಪರಮ ಪೂಜ್ಯ ಬಾಪೂರವರ ಪರಮ ಭಕ್ತರು. ಅವರು ಒಮ್ಮೆ ನಮ್ಮ ಮನೆಗೆ ಬಂದಾಗ 12 ಘಂಟೆಯವರೆಗೆ ಕುಳಿತು ಬಾಪೂರವರ ಪ್ರಕಟೀಕರಣ, ಅವರ ಉಪಾಸನಾ, ಅವರ ಚಮತ್ಕಾರ ಮತ್ತು ಅವರ ಮಹಿಮೆಯ ಬಗ್ಗೆ ನಮಗೆ ವಿಸ್ತಾರವಾಗಿ ವರ್ಣಿಸಿದರು. ಅದೇ ದಿನದಿಂದ ನನ್ನ ಪರಿವಾರದವರು ಬಾಪೂರವರ ಭಕ್ತಿಯಲ್ಲಿ ತೊಡಗಿದರು. ಅಲ್ಲದೆ, ಪ್ರತಿಯೊಬ್ಬರಿಗೂ ವಿವಿಧ ರೀತಿಯ ಅನುಭವವಾಯಿತು. ನಾನು ಅದೇ ದಿನ ಬಾಪೂರವರೊಡನೆ ಹೇ ಈಶ್ವರ, ನಾನು ಮೂರ್ಖ, ಅಜ್ಞಾನಿ, ಪಾಪಿಯ ಮೇಲೆ ನೀನು ಕೃಪೆಯನ್ನು ತೋರುವೆ ಎಂದು ಮನಃಪೂರ್ವಕವಾಗಿ ಪ್ರಾರ್ಥನೆ ಮಾಡುತ್ತಿದ್ದಾಗ, ನನ್ನ ಎರಡೂ ಕಣ್ಣುಗಳಲ್ಲಿ ಕಣ್ಣೀರು ಸುರಿಯಿತು. ನಾನು ತುಂಬಾ ಸಮಯದವರೆಗೆ ಅಳುತ್ತಾ ಕುಳಿತೆನು. ಬಾಪೂಜಿಯವರು ನನ್ನ ಪ್ರಾರ್ಥನೆಯನ್ನು ಸ್ವೀಕಾರ ಮಾಡಿದರು. ನಾನು ಬಾಪೂಜಿಯವರ ಜಪ ‘‘ಓಂ ಮನಃ ಸಾಮರ್ಥ್ಯದಾತಾ ಶ್ರೀ ಅನಿರುದ್ಧಾಯ ನಮಃ’’ವನ್ನು ಜಪಿಸಲು ಶುರುಮಾಡಿದೆ. ಈಗ ಈ ಮಂತ್ರದ ಜಪ ನನ್ನೊಳಗೆ ಯಾವಾಗಲೂ ನಡೆಯುತ್ತಾ ಇರುತ್ತದೆ. ಈ ಮಂತ್ರದ ಪ್ರಭಾವದಿಂದ ನಾನು ಕೆಲವು ಸಂಕಷ್ಟಗಳಿಂದ ಪಾರಾದೆ ಇದು ಯಾವು ಚಮತ್ಕಾರದಿಂದ ಕಡಿಮೆ ಇಲ್ಲ.

ಈಗ ನಾನು ಬಾಪೂರವರ ಚಮತ್ಕಾರದ ಬಗ್ಗೆ ವರ್ಣನೆ ಮಾಡುತ್ತೇನೆ.

14-03-2008ರ ಬೆಳಿಗ್ಗೆ 7 ಘಂಟೆಯ ಸುಮಾರಿಗೆ ನನ್ನ ಮಗನನ್ನು ಬೈಕ್‌ನಲ್ಲಿ ಶಾಲೆಗೆ ಬಿಟ್ಟು ಹೊರಗೆ ಬಂದೆ. ಅದೇ ದಿನ ಮುಂಬಯಿಯಿಂದ ಶ್ರೀ ವಾಜಪೇಯಿ (ಬಾಪೂರವರ ಪರಮ ಭಕ್ತ)ಯವರು ಸಂಸ್ಥೆಯ ಉದಿ (ವಿಭೂತಿ) ಮತ್ತು ಉಪಾಸನೆಯ ಪುಸ್ತಕಗಳನ್ನು ರೈಲಿನಲ್ಲಿ ಬರುವವರೊಡನೆ ಕಳುಹಿಸಿದ್ದರು. ಅದನ್ನು ತೆಗೆದುಕೊಳ್ಳಲು ರೈಲ್ವೆ ನಿಲ್ದಾಣಕ್ಕೆ ಹೋಗುತ್ತಿದ್ದೆನು. ಅದೇ ಸಮಯಕ್ಕೆ ನನ್ನ ಬೈಕ್‌ಗೆ ಹಿಂದಿನ ಬೈಕ್‌ನವನು ಬಹಳ ಜೋರಾಗಿ ಬಂದು ತಾಗಿಸಿದನು. ಅದರಿಂದಾಗಿ ನನ್ನ ಬೈಕ್‌ನ ಹ್ಯಾಂಡಲ್ ಓರೆ ಆಯಿತು. ಆಗ ನಾನು ಬೀಳುತ್ತಿದ್ದರೆ? ಆವಾಗೆ ನನಗೆ



ಅರಿವಾದದ್ದೇನೆಂದರೆ, ಯಾವುದೋ ಅದೃಶ್ಯ ಶಕ್ತಿ ಬಂದು ತನ್ನ ಭುಜಗಳಿಂದ ನನ್ನನ್ನು ಎತ್ತಿ ರಸ್ತೆಯಲ್ಲಿ ಕುಳ್ಳಿರಿಸಿದರೆಂದು ಬೈಕಿನ ಹಿಂದಿನ ರಿಮ್ ಮತ್ತು ಕತ್ತರಿಯ ಮೇಲೆ ಇರುವ ಬೈಕಿನ ತಳವೇ ಓರೆ ಆಗಿತ್ತು.

ಈ ಅಪಘಾತವನ್ನು ನೋಡುವವರ ಮೈಯ ರೋಮ ನೆಟ್ಟಾಗುವಂತಿತ್ತು. ಆದರೆ, ನಾನು ಜನರಲ್ಲಿ ಏನಾಯಿತು? ಎಂದು ಕೇಳಿದೆ. ಇಷ್ಟು ದೊಡ್ಡ ಅಪಘಾತವಾದರೂ ನನಗೆ ಸೂಜಿ ಚುಚ್ಚಿದಷ್ಟು ತಾಗಲಿಲ್ಲ. ನಾನು ಆ ಸಮಯದಲ್ಲಿ ಬಾಪೂಜಿಯವರ ಮಂತ್ರ ‘‘ಓಂ ಮನಃ ಸಾಮರ್ಥ್ಯದಾತಾ ಶ್ರೀ ಅನಿರುದ್ಧಾಯ ನಮಃ’’ದ ಜಪ ಮಾಡುತ್ತಾ ಇದ್ದೆ. ಅದರ ಪ್ರಭಾವದಿಂದಲೇ ಸುರಕ್ಷಿತವಾಗಿರಲು ಸಾಧ್ಯವಾಯಿತು.

ಅನುಭವ ಹಲವಾರು ಇವೆ. ಆದರೆ, ನಾನು ಪ್ರತೀಕ್ಷಣ ಬಾಪೂಜಿಯವರ ಕೃಪೆಯ ಅನುಭವ ಪಡೆಯುತ್ತಾ ಇರುತ್ತೇನೆ. ನನ್ನ ಬಾಪೂಜಿಯವರ ಚರಣಗಳಿಗೆ ವಿನಮ್ರ ಪ್ರಾರ್ಥನೆ ಏನೆಂದರೆ ಅವರ ಕೃಪೆ ನನ್ನ ಮೇಲೆ ಮತ್ತು ನನ್ನ ಪರಿವಾರದವರ ಮೇಲೆ ಸದಾ ಇರಲಿ ಎಂದು.

ANUBHAVS

# HARI OM

© Copyright 2010, Manasamarthyadata.com

manasamarthyadata.com